
# ಆತ್ಮನಿರ್ಭರ ಭಾರತ

## ಭಾಗ-5: ಸರ್ಕಾರದ ಸುಧಾರಣೆಗಳು ಮತ್ತು ಶಕ್ತಿ ತುಂಬುವುದು

**17.05.2020**

सत्यमेव जयते
Gov ernment Of India



**ಕೋವಿಡ್ ನಿಯಂತ್ರಣಕ್ಕೆ ಈವರೆಗೆ ಕೈಗೊಂಡ ಆರೋಗ್ಯ ಸಂಬಂಧಿ ಕ್ರಮಗಳು**

**ಈಗಾಗಲೇ ಘೋಷಿಸಲ್ಪಟ್ಟಿರುವುದು - 15,000 ಕೋಟಿರೂ.**

- ರಾಜ್ಯಗಳಿಗೆ ಬಿಡುಗಡೆ 4113 ಕೋಟಿ.ರೂ.
- ಅತ್ಯವಶ್ಯ ವಸ್ತುಗಳಿಗೆ 3750 ಕೋಟಿ.ರೂ.
- ಪರೀಕ್ಷಾ ಲ್ಯಾಬ್ & ಕಿಟ್ 550 ಕೋಟಿ.ರೂ.
- ಪ್ರಧಾನಮಂತ್ರಿ ಗರೀಬ್ ಕಲ್ಯಾಣ ಯೋಜನೆ ಅಡಿ ಆರೋಗ್ಯ ವೃತ್ತಿಪರರಿಗೆ ಪ್ರತಿ ವ್ಯಕ್ತಿಗೆ 50 ಲಕ್ಷ ರೂ.ವಿಮೆ.

**ಐಟಿ ಬಳಕೆಯ ಲಾಭ:**

- ಇ-ಸಂಜೀವಿನಿ ದೂರವಾಣಿ ಸಮಾಲೋಚನಾ ಸೇವೆಗಳ ಆರಂಭ
- ಸಾಮರ್ಥ್ಯವೃದ್ಧಿ: ವಸ್ತುಶಃ ಕಲಿಕಾ ಪದ್ಧತಿ - ಐಗಾಟ್ ವೇದಿಕೆ
- ಆರೋಗ್ಯ ಸೇತು: ಸ್ವಯಂ ಮೌಲ್ಯಾಂಕನ ಮತ್ತು ಸಂಪರ್ಕ ಪತ್ತೆ

**ಆರೋಗ್ಯ ಕಾರ್ಯಕರ್ತರ ರಕ್ಷಣೆ**

- ಸಾಂಕ್ರಾಮಿಕ ರೋಗಗಳ ಕಾಯ್ದೆಗೆ ತಿದ್ದುಪಡಿ
- ಅವಶ್ಯಕತೆ ಇರುವಷ್ಟು ಪಿಪಿಇಗಳ ಪೂರೈಕೆ -
  - ಶೂನ್ಯದಿಂದ > 300 ದೇಶೀಯ ಉತ್ಪಾದಕರು
  - ಈಗಾಗಲೇ ಪೂರೈಕೆ – ಪಿಪಿಇ ಕಿಟ್ ಗಳು (51 ಲಕ್ಷ), ಎನ್95 ಮಾಸ್ಕ್ (87 ಲಕ್ಷ) ಎಸ್ ಸಿಕ್ಯೂ ಮಾತ್ರೆಗಳು (11.08 ಕೋಟಿ )



# ಸುಗಮ ವ್ಯವಹಾರಕ್ಕೆ ಆಡಳಿತದಲ್ಲಿ ಸುಧಾರಣೆಗಳು

- ಜಾಗತಿಕವಾಗಿ ಸಂಭಾವ್ಯ ಹೂಡಿಕೆದಾರರು ದೇಶದ ಸುಗಮ ವ್ಯವಹಾರ ಶ್ರೇಯಾಂಕ (ಡಿಬಿಆರ್) ಗಮನಿಸುತ್ತಾರೆ.

- ಸುಸ್ಥಿರ ಕ್ರಮಗಳ ಪರಿಣಾಮ ಭಾರತದ ಸ್ಥಿತಿ ಗಣನೀಯ ಸುಧಾರಣೆ:ವಿಶ್ವ ಬ್ಯಾಂಕ್ ನ ಸುಗಮ ವ್ಯಾಪಾರ ವರದಿ ಶ್ರೇಯಾಂಕ 2014ರಲ್ಲಿ 142ರಲ್ಲಿ ಇದ್ದದ್ದು, 2019ರಲ್ಲಿ 63ಕ್ಕೆ ಏರಿಕೆ.

- ಇದರಲ್ಲಿ ಪರ್ಮಿಟ್ ಮತ್ತು ಪರವಾನಗಿಗಳ ಮಂಜೂರು, ಸ್ವಯಂ ಪ್ರಮಾಣೀಕರಣ ಮತ್ತು ಮೂರನೇ ವ್ಯಕ್ತಿ ಪ್ರಮಾಣೀಕರಣ ಮತ್ತಿತರ ಹಲವು ಮೇಲ್ದರ್ಜೆಗೇರಿಸುವ ಪ್ರಕ್ರಿಯೆಗಳು ಸೇರಿವೆ.

- ಮುಂದಿನ ಹಂತದ ಸುಗಮ ವಹಿವಾಟು ಸುಧಾರಣೆಗಳಿಗಾಗಿ ಭಾರತ ಸಮರೋಪಾದಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಆಸ್ತಿ ನೋಂದಣಿ ಸರಳಗೊಳಿಸುವುದು, ವಾಣಿಜ್ಯ ವ್ಯಾಜ್ಯಗಳನ್ನು ತ್ವರಿತವಾಗಿ ಇತ್ಯರ್ಥಗೊಳಿಸುವುದು, ಭಾರತವನ್ನು ವ್ಯಾಪಾರಕ್ಕೆ ಸುಲಭ ತಾಣವನ್ನಾಗಿ ರೂಪಿಸಲು ಸರಳ ತೆರಿಗೆ ಪದ್ಧತಿ ಮತ್ತಿತರ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.



## ಸುಗಮ ವ್ಯವಹಾರಕ್ಕೆ ಕ್ರಮಗಳನ್ನು ಉತ್ತೇಜಿಸಲು ಇತ್ತೀಚಿನ ಕಾರ್ಪೊರೇಟ್ ಕಾನೂನುಗಳ ಕ್ರಮಗಳು

- 2018ರ ಕಂಪನಿ ಕಾನೂನುಗಳು ಡಿಫಾಲ್ಟ್ ಗಳನ್ನು ಅಪರಾಧವಾಗಿ ಪರಿಗಣಿಸದಿರುವ ಮೊದಲ ಹಂತದಲ್ಲಿ, 16 ಸಂಯುಕ್ತ ಅಪರಾಧಗಳು ಇಲಾಖೆಯೊಳಗೆ ರಾಜಿ ಮೂಲಕ ಇತ್ಯರ್ಥ ಮತ್ತು ದಂಡ ಕಾರ್ಯತಂತ್ರಕ್ಕೆ ವರ್ಗಾವಣೆ.
- ಸಮಗ್ರ ವೆಬ್ ಆಧಾರಿತ ಕಂಪನಿ ಸ್ಥಾಪನೆ ನಮೂನೆ – ಸರಳೀಕೃತ ಕಂಪನಿ ಸ್ಥಾಪಿಸುವ ಅರ್ಜಿ ನಮೂನೆ ವಿದ್ಯುನ್ಮಾನ ಪ್ಲಸ್ (ಎಸ್ ಪಿ ಐಸಿಇ +) ಪರಿಚಯ. ಇದರಿಂದ ನಾನಾ ಸಚಿವಾಲಯಗಳ 10 ಸೇವೆಗಳು ಮತ್ತು ಒಂದು ರಾಜ್ಯ ಸರ್ಕಾರದ ಸೇವೆ ಒಂದೇ ಅರ್ಜಿ ನಮೂನೆಯಲ್ಲಿ ಲಭ್ಯ.
- ಅವಲಂಬಿತ ನಿರ್ದೇಶಕರ ದತ್ತಾಂಶ ಬ್ಯಾಂಕ್ ಆರಂಭ.
- ಕಂಪನಿ ಕಾಯ್ದೆ 2013ರ ಅಡಿಯಲ್ಲಿ 14,000ಕ್ಕೂ ಅಧಿಕ ವಿಚಾರಣೆಗಳನ್ನು ಹಿಂತೆಗೆದುಕೊಳ್ಳಲಾಗಿದೆ.



# ಸುಗಮ ವ್ಯವಹಾರಕ್ಕೆ ಇತ್ತೀಚಿನ ಕಾರ್ಪೊರೇಟ್ ಕಾನೂನು ಕ್ರಮಗಳು

- **ಪಕ್ಷಗಾರರ ವಹಿವಾಟು ಸಂಬಂಧ ಅಂಶಗಳನ್ನು ಏಕರೂಪಗೊಳಿಸುವುದು.**
- **ಕಂಪನಿ ಕಾಯ್ದೆ 2013ರ ನಾನಾ ಅಂಶಗಳ ಅಡಿಯಲ್ಲಿ ಅನುಪಾಲನೆ ಹೊರೆಯಾಗದಂತೆ ಕೋವಿಡ್-19 ಸಮಯದಲ್ಲಿ ಸಕಾಲಿಕ ಕ್ರಮ,** ಅಲ್ಲದೆ ಡಿಜಿಟಲ್ ಮಾಧ್ಯಮ ಸಾಮರ್ಥ್ಯವನ್ನು ಬಳಸಿಕೊಂಡು ಕಂಪನಿಗಳಿಗೆ ಆಡಳಿತ ಮಂಡಳಿ ಸಭೆ, ಇಜಿಎಂ ಮತ್ತು ಎಜಿಎಂ ಹಕ್ಕುಗಳ ಕುರಿತು ಚಟುವಟಿಕೆಗಳನ್ನು ನಡೆಸಲು ಅವಕಾಶ.
- 221 ಇತ್ಯರ್ಥವಾದ ಪ್ರಕರಣಗಳಲ್ಲಿ 2016ರ ಐಬಿಸಿ ಜಾರಿಗೊಳಿಸಿದ ನಂತರ ಶೇ.44ರಷ್ಟು ವಸೂಲಿ ಸಾಧನೆ.
- ಹೆಚ್ಚುವರಿ ಕ್ಲೈಮ್ -ಮೊತ್ತ 4.13 ಲಕ್ಷ ಕೋಟಿ ರೂ.
- ಸ್ವೀಕರಿಸಿದ - ಮೊತ್ತ 1.84 ಲಕ್ಷ ಕೋಟಿ ರೂ.
- ಐಬಿಸಿ ಅಡಿಯಲ್ಲಿ ಸುಮಾರು 5.01 ಲಕ್ಷ ಕೋಟಿ(ಅಂದಾಜು) ಮೊತ್ತದ 13,566 ಪ್ರಕರಣಗಳನ್ನು ಐಬಿಸಿ ಅಡಿಯಲ್ಲಿ 2020ರ ಫೆಬ್ರವರಿ 29ಕ್ಕೆ ಮುನ್ನ ವಾಪಸ್ ಪಡೆಯಲಾಗಿದೆ.



**ತಂತ್ರಜ್ಞಾನ ಆಧಾರಿತ ವ್ಯವಸ್ಥೆ - ಕೋವಿಡ್ ಸಮಯದಲ್ಲಿ ಆನ್ ಲೈನ್ ಶಿಕ್ಷಣ**

- ಅಂತರ್ಜಾಲ ಸಂಪರ್ಕ ಹೊಂದಿಲ್ಲದವರನ್ನು ತಲುಪಲು ಮತ್ತು ಬೆಂಬಲ ನೀಡಲು ಸ್ವಯಂಪ್ರಭಾ ಡಿಟಿಎಚ್ ಚಾನಲ್, ಶಾಲಾ ಶಿಕ್ಷಣಕ್ಕೆ ಈಗಾಗಲೇ ಮೂರು ಚಾನಲ್ ನಿಗದಿ. ಇದೀಗ ಮತ್ತೆ 12 ಚಾನಲ್ ಗಳ ಸೇರ್ಪಡೆ.
- ಈ ಚಾನಲ್ ಗಳಿಂದ ಸ್ಕೈಪ್ ಮೂಲಕ ಮನೆಗಳಿಂದಲೇ ತಜ್ಞರಿಂದ ನೇರ ಸಂವಾದಾತ್ಮಕ ತರಗತಿಗಳ ಪ್ರಸಾರಕ್ಕೆ ವ್ಯವಸ್ಥೆ.
- ಖಾಸಗಿ ಡಿಟಿಎಚ್ ಆಪರೇಟರ್ ಗಳಾದ ಟಾಟಾ ಸ್ಕೈ ಮತ್ತು ಏರ್ ಟೆಲ್ ನೊಂದಿಗೆ ಒಪ್ಪಂದ ಮಾಡಿಕೊಂಡು, ಶೈಕ್ಷಣಿಕ ವಿಡಿಯೊ ಪಠ್ಯವನ್ನು ಪ್ರಸಾರ ಮಾಡಲು ಆ ಚಾನಲ್ ಗಳ ಮೂಲಕ ಕ್ರಮ.
- ಸ್ವಯಂಪ್ರಭಾ ವಾಹಿನಿಯಲ್ಲಿ ರಾಜ್ಯಗಳ ಶೈಕ್ಷಣಿಕ ಸಂಬಂಧಿ ಪಠ್ಯ ಪ್ರಸಾರಕ್ಕೆ ಪ್ರಸಾರ ಸಮಯ (ಪ್ರತಿ ದಿನ 4 ಗಂಟೆ) ಹಂಚಿಕೆಗೆ ರಾಜ್ಯಗಳೊಂದಿಗೆ ಸಮನ್ವಯ.
- ಮಾರ್ಚ್ 24ರಿಂದ ಈ ದಿನದವರೆಗೆ ದೀಕ್ಷಾ ವೇದಿಕೆಯಲ್ಲಿ 61 ಕೋಟಿ ಜನ(ಹಿಟ್ಸ್) ಬಳಕೆ.
- ಇ-ಪಾಠಶಾಲಾಗೆ 200 ಹೊಸ ಪಠ್ಯ ಪುಸ್ತಕಗಳ ಸೇರ್ಪಡೆ.





# ಸರ್ಕಾರದ ಸುಧಾರಣೆಗಳು ಮತ್ತು ಶಕ್ತಿ ತುಂಬುವುದು

सत्यमेव जयते
Goverment Of India



## ಮನ್ರೇಗಾ ಅಡಿಯಲ್ಲಿ ಹೆಚ್ಚಿನ ಉದ್ಯೋಗಾವಕಾಶ ಸೃಷ್ಟಿಗೆ 40,000 ಕೋಟಿ ಹೆಚ್ಚುವರಿ ಅನುದಾನ ಹಂಚಿಕೆ

- ಸರ್ಕಾರದಿಂದ ಇದೀಗ ಮನ್ರೇಗಾ ಅಡಿಯಲ್ಲಿ ಹೆಚ್ಚುವರಿಯಾಗಿ 40,000 ಕೋಟಿ ರೂ.ಗಳನ್ನು ಹಂಚಿಕೆ.
- ಇದರಿಂದ ಒಟ್ಟು 300 ಕೋಟಿ ಮಾನವ ದಿನ ಉದ್ಯೋಗ ಸೃಷ್ಟಿಸಲು ಸಹಕಾರಿ
- ಮುಂಗಾರು ಹಂಗಾಮಿನಲ್ಲಿ ವಾಪಸ್ಸಾಗಿರುವ ವಲಸೆ ಕಾರ್ಮಿಕರು ಸೇರಿದಂತೆ ಇತರರಿಗೆ ಅಗತ್ಯ ಉದ್ಯೋಗಗಳ ಸೃಷ್ಟಿ.
- ಜಲಸಂರಕ್ಷಣಾ ಸ್ವತ್ತು ಸಂಬಂಧಿಸಿದಂತೆ ಜೀವನೋಪಾಯ ಮತ್ತು ಜೀವನಾಧಾರಕ್ಕೆ ಅಗತ್ಯ ಸ್ವತ್ತುಗಳ ಸೃಷ್ಟಿ.
- ಹೆಚ್ಚಿನ ಉತ್ಪಾದನೆ ಮೂಲಕ ಗ್ರಾಮೀಣ ಆರ್ಥಿಕತೆಗೆ ಉತ್ತೇಜನ ದೊರಕಲಿದೆ.



# ಆರೋಗ್ಯ ಸುಧಾರಣೆಗಳು ಮತ್ತು ಉಪಕ್ರಮಗಳು

**ಸಾರ್ವಜನಿಕ ಆರೋಗ್ಯದಲ್ಲಿ ಹೆಚ್ಚಿನ ಬಂಡವಾಳ ಹೂಡಿಕೆ**

- **ಆರೋಗ್ಯದ ಮೇಲಿನ ಸಾರ್ವಜನಿಕ ವೆಚ್ಚ ಹೆಚ್ಚಳ**
- **ತಳಮಟ್ಟದ ಆರೋಗ್ಯ ಸಂಸ್ಥೆಗಳಲ್ಲಿ ಹೆಚ್ಚಿನ ಬಂಡವಾಳ ಹೂಡಿಕೆ**
    - ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಆರೋಗ್ಯ ಮತ್ತು ಸ್ವಾಸ್ಥ್ಯ ಕೇಂದ್ರಗಳಿಗೆ ಹೆಚ್ಚಿನ ನೆರವು.


**ಭವಿಷ್ಯದ ಸಾಂಕ್ರಾಮಿಗಳಿಗೆ ಭಾರತವನ್ನು ಸಜ್ಜುಗೊಳಿಸುವುದು**

- ಎಲ್ಲ ಜಿಲ್ಲೆಗಳಲ್ಲಿ ಸೋಂಕಿತ ರೋಗಗಳ ಆಸ್ಪತ್ರೆಬ್ಲಾಕ್ ಗಳಸ್ಥಾಪನೆ
- **ಪ್ರಯೋಗಾಲಯ ಜಾಲ ಮತ್ತು ನಿಗಾ ವ್ಯವಸ್ಥೆ ಬಲವರ್ಧನೆ**
    - ಎಲ್ಲ ಜಿಲ್ಲೆಗಳಲ್ಲಿ ಸಮಗ್ರ ಸಾರ್ವಜನಿಕ ಆರೋಗ್ಯ ಲ್ಯಾಬ್ ಗಳ ಸ್ಥಾಪನೆ ಮತ್ತು ಬ್ಲಾಕ್ ಮಟ್ಟದಲ್ಲಿ ಪ್ರಯೋಗಾಲಯ ಹಾಗೂ ಸಾಂಕ್ರಾಮಿಕಗಳ ನಿರ್ವಹಣೆಗೆ ಸಾರ್ವಜನಿಕ ಆರೋಗ್ಯ ಘಟಕ.
- **ಸಂಶೋಧನೆಗೆ ಉತ್ತೇಜನ** –ಐಸಿಎಂಆರ್ ನಿಂದ ಆರೋಗ್ಯಕ್ಕಾಗಿ ರಾಷ್ಟ್ರೀಯ ಸಾಂಸ್ಥಿಕ ವೇದಿಕೆ
- **ರಾಷ್ಟ್ರೀಯ ಡಿಜಿಟಲ್ ಆರೋಗ್ಯ ಮಿಷನ್:** ರಾಷ್ಟ್ರೀಯ ಡಿಜಿಟಲ್ ಆರೋಗ್ಯ ನೀಲನಕ್ಷೆ ಅನುಷ್ಠಾನ



# ಕೋವಿಡ್ ನಂತರ ತಂತ್ರಜ್ಞಾನ ಆಧಾರಿತ ಸಮಾನ ಶಿಕ್ಷಣ

- **ಪಿಎಂ-ಇವಿದ್ಯಾ**-ಡಿಜಿಟಲ್/ ಆನ್ ಲೈನ್ ಶಿಕ್ಷಣದ ಲಭ್ಯತೆಗೆ ಬಹುವಿಧಧ ಕಾರ್ಯಕ್ರಮ ತಕ್ಷಣವೇ ಆರಂಭ: ಇವುಗಳನ್ನು ಒಳಗೊಂಡಂತೆ.
- ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಲ್ಲಿ ಶಾಲಾ ಶಿಕ್ಷಣಕ್ಕೆ ದೀಕ್ಷಾ: ಇ-ಪಠ್ಯ ಮತ್ತು ಕ್ಯೂಆರ್ ಸಂಕೇತದ ಉತ್ಸಾಹ ತುಂಬುವ ಪಠ್ಯ ಪುಸ್ತಕ ಎಲ್ಲ ವರ್ಗದವರಿಗೂ**(ಒಂದು ರಾಷ್ಟ್ರ, ಒಂದು ಡಿಜಿಟಲ್ ವೇದಿಕೆ)**
- 1 ರಿಂದ 12ನೇ ತರಗತಿವರೆಗೆ ಪ್ರತಿ ತರಗತಿಗೂ ಒಂದು ನಿಗದಿತ ಟಿವಿ ಚಾನಲ್**(ಒಂದು ಕ್ಲಾಸ್, ಒಂದು ಚಾನಲ್)**
- ರೇಡಿಯೋ, ಸಮುದಾಯ ರೇಡಿಯೋ ಮತ್ತು ಪೋಡ್ ಕಾಸ್ಟ್ ಗಳ ವ್ಯಾಪಕ ಬಳಕೆ.
- ದೃಷ್ಟಿ ಚೇತನ ಮತ್ತು ಶ್ರವಣದೋಷ ಇರುವವರಿಗೆ ವಿಶೇಷ ಇ-ಪಠ್ಯ
- 2020ರ ಮೇ 30ರಿಂದ ಸ್ವಯಂಚಾಲಿತವಾಗಿ ಆನ್ ಲೈನ್ ಕೋರ್ಸ್ ಗಳನ್ನು ಆರಂಭಿಸಲು ದೇಶದ ಅಗ್ರ 100 ವಿಶ್ವವಿದ್ಯಾಲಯಗಳಿಗೆ ಅನುಮತಿ.
- **ಮನೋದರ್ಪಣ**- ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಅವರ ಕುಟುಂಬದವರಿಗೆ ಮಾನಸಿಕವಾಗಿ ಬೆಂಬಲ ನೀಡಲು, ಅವರ ಮಾನಸಿಕ ಆರೋಗ್ಯ ಹಾಗೂ ಭಾವನಾತ್ಮಕ ಯೋಗಕ್ಷೇಮಕ್ಕೆ ಸ್ಪಂದಿಸಲು ತಕ್ಷಣವೇ ಆರಂಭ.
- ಶಾಲೆ, ಬಾಲ್ಯ ಮತ್ತು ಶಿಕ್ಷಕರಿಗಾಗಿ ಹೊಸ ರಾಷ್ಟ್ರೀಯ ಪಠ್ಯ ಕ್ರಮ ಮತ್ತು ಶಿಕ್ಷಣ ಚೌಕಟ್ಟು ಸಹ ಪ್ರಾರಂಭಿಸಲಾಗುವುದು. 21ನೇ ಶತಮಾನದ ಕೌಶಲ್ಯದ ಅಗತ್ಯತೆಗಳು ಮತ್ತು ಜಾಗತಿಕ ಬೇಡಿಕೆಗಳನ್ನು ಒಗ್ಗೂಡಿಸಿ.
- 2025ರ ವೇಳೆಗೆ ಪ್ರತಿ ಮಗುವು 5ನೇ ತರಗತಿಯಲ್ಲಿ ಕಲಿಕೆಯ ಮಟ್ಟವನ್ನು ಮತ್ತು ಫಲಿತಾಂಶಗಳನ್ನು ಪಡೆಯುವುದನ್ನು ಖಾತ್ರಿಪಡಿಸಿಕೊಳ್ಳಲು ರಾಷ್ಟ್ರೀಯ ಅಡಿಪಾಯ ಸಾಕ್ಷರತೆ ಮತ್ತು ರಾಷ್ಟ್ರೀಯ ಸಂಖ್ಯಾ ಮಿಷನ್ 2020ರ ಡಿಸೆಂಬರ್ ನಲ್ಲಿ ಆರಂಭ.



# ಐಬಿಸಿ ಸಂಬಂಧಿತ ಕ್ರಮಗಳ ಮೂಲಕ
# ಸುಗಮ ವ್ಯಾಪಾರಕ್ಕೆ ಮತ್ತಷ್ಟು ಕ್ರಮಗಳ ಉತ್ತೇಜನ

Goverment Of India

- ದಿವಾಳಿತನ  ಪ್ರಕ್ರಿಯೆ ಪ್ರಾರಂಭಿಸಲು ಕನಿಷ್ಠ ಮಿತಿ ಮೊತ್ತ ಒಂದು ಕೋಟಿಗೆ ಏರಿಕೆ( ರೂ.1ಲಕ್ಷದಿಂದ, ಹೆಚ್ಚಾಗಿ ಇದು ಬಹುತೇಕ ಎಂಎಸ್ ಎಂಇಗಳಿಗೆ ಅನುಕೂಲ)
- ಸೆಕ್ಷನ್ 240ಎ ಅಡಿ ಎಂಎಸ್ಎಂಇಗಳಿಗೆ ವಿಶೇಷ ದಿವಾಳಿತನ ಪರಿಹಾರ ನೀತಿ ಸಂಹಿತೆ ಸದ್ಯದಲ್ಲೇ ಅಧಿಸೂಚನೆ.
- ಸಾಂಕ್ರಾಮಿಕ ರೋಗದ ಸ್ಥಿತಿಗತಿ ಆಧರಿಸಿ ಒಂದು ವರ್ಷದವರೆಗೆ ಹೊಸದಾಗಿ ಯಾವುದೇ ದಿವಾಳಿತನ ಪ್ರಕ್ರಿಯೆ ಕೈಗೊಳ್ಳುವುದು ಸ್ಥಗಿತ.
- ದಿವಾಳಿತನ ಪ್ರಕ್ರಿಯೆಗಳನ್ನು ಉತ್ತೇಜಿಸುವ ಉದ್ದೇಶದಿಂದ ಕೋವಿಡ್-19 ಸಂಬಂಧಿ ಸಾಲವನ್ನು 'ಡಿಫಾಲ್ಟ್' ವ್ಯಾಖ್ಯಾನದಿಂದ ಹೊರಗಿಡಲು ಕೇಂದ್ರ ಸರ್ಕಾರಕ್ಕೆಅಧಿಕಾರ.

# ಕಂಪನಿಗಳ ಕಾಯ್ದೆಯ ಡಿಫಾಲ್ಟ್ ಗಳನ್ನು ಅಪರಾಧವೆಂದು ಪರಿಗಣಿದಿರುವುದು

सत्यमेव जयते
Goverment Of India

- ಸಣ್ಣ ತಾಂತ್ರಿಕ ಮತ್ತು ನಿಯಮಾವಳಿಯಲ್ಲಿ ದೋಷ  ಉಲ್ಲಂಘನೆಗೆ ಕಂಪನಿ ಕಾಯ್ದೆ ಅಡಿ ಅಪರಾಧವಲ್ಲ ಎಂದು ಪರಿಗಣಿಸುವುದು.(ಸಿಎಸ್ಆರ್ ವರದಿಯಲ್ಲಿನ ನ್ಯೂನತೆಗಳು, ಆಡಳಿತ ಮಂಡಳಿ ವರದಿಯಲ್ಲಿನ ಲೋಪಗಳು, ಫೈಲಿಂಗ್ ದೋಷ, ಎಜಿಎಂ ಮಾಡುವಲ್ಲಿ ವಿಳಂಬ ಇತ್ಯಾದಿ)
- ಬಹುತೇಕ ದಂಡನಾ ಅಪರಾಧಗಳ ಸೆಕ್ಷನ್ ಗಳನ್ನು ಆಂತರಿಕ ಹೊಂದಾಣಿಕ ಕಾರ್ಯತಂತ್ರ(ಐಎಎಂ)ಗೆ ವರ್ಗಾವಣೆ. ಆರ್ ಡಿ ಕಾಂಪೋಂಡಿಂಗ್ ಅಧಿಕಾರ ಹೆಚ್ಚಳ (ಮೊದಲು ಐಎಎಂ ಅಡಿಯಲ್ಲಿ 18 ಸೆಕ್ಷನ್ ಗಳಿದ್ದವು. ಇದೀಗ 58 ಸೆಕ್ಷನ್ ಸೇರಿಸಲಾಗಿದೆ).
- ಈ ತಿದ್ದುಪಡಿಗಳಿಂದಾಗಿ ಕ್ರಿಮಿನಲ್ ನ್ಯಾಯಾಲಯ ಮತ್ತು ಎನ್ ಸಿಎಲ್ ಟಿಗಳಲ್ಲಿ ದಟ್ಟಣೆ ತಗ್ಗಲಿದೆ.
- 7 ಸಂಯುಕ್ತ ದಂಡನಾ ಅಪರಾಧಗಳನ್ನು ಸಂಪೂರ್ಣವಾಗಿ ಕೈಬಿಡಲಾಗಿದೆ. ಐದನ್ನು ಪರ್ಯಾಯ ಚೌಕಟ್ಟಿನಲ್ಲಿ ವ್ಯವಹರಿಸಲಾಗುವುದು.

# ಕಾರ್ಪೊರೇಟ್ ಗಳ ಸುಗಮ ವಹಿವಾಟಿಗೆ ಕ್ರಮ

- ‘ಉದ್ಯಮ ಆರಂಭ’ ಮತ್ತು ‘ದಿವಾಳಿತನ ನಿರ್ಣಯ’ ಶ್ರೇಯಾಂಕದಲ್ಲಿ ಸುಧಾರಣೆಯಿಂದಾಗಿ ಒಟ್ಟಾರೆ ಇಒಡಿಬಿಯಲ್ಲಿ ಭಾರತದ ಶ್ರೇಯಾಂಕದಲ್ಲಿ ಸುಧಾರಣೆ.
- **ಮತ್ತಷ್ಟು ಪ್ರಮುಖ ಸುಧಾರಣೆಗಳು ಹೀಗಿವೆ:**
- ಅನುಮತಿಸಲಾದ ವಿದೇಶಗಳ ವ್ಯಾಪ್ತಿಯಲ್ಲಿ ಭಾರತೀಯ ಕಂಪನಿಗಳ ಷೇರುಗಳನ್ನು ನೇರ ಲಿಸ್ಟಿಂಗ್ .
- ಷೇರು ವಿನಿಮಯ ಮಾರುಕಟ್ಟೆಗಳ ಎನ್ ಸಿಡಿ ಪಟ್ಟಿ ಮಾಡುವ ಖಾಸಗಿ ಕಂಪನಿಗಳನ್ನು ಲಿಸ್ಟೆಡ್ ಕಂಪನಿಗಳೆಂದು ಪರಿಗಣಿಸಬಾರದು.
- ಕಂಪನಿಗಳ ಕಾಯ್ದೆ 2013ರಲ್ಲಿ, ಕಂಪನಿಗಳ ಕಾಯ್ದೆ 1956 ಭಾಗ IXಎ (ಉತ್ಪಾದಕ ಕಂಪನಿಗಳು) ರ ನಿಬಂಧನೆಗಳನ್ನು ಸೇರಿಸುವುದು.
- ಎನ್ ಸಿಎಲ್ಎಟಿಯ ಹೆಚ್ಚುವರಿ ಮತ್ತು ವಿಶೇಷ ಪೀಠಗಳ ಸ್ಥಾಪನೆ ಅಧಿಕಾರ
- ಸಣ್ಣ ಕಂಪನಿಗಳು, ಏಕವ್ಯಕ್ತಿ ಕಂಪನಿಗಳು, ಉತ್ಪಾದಕ ಕಂಪನಿಗಳು ಮತ್ತು ನವೋದ್ಯಮಗಳ ದೋಷಗಳಿಗೆ ಕಡಿಮೆ ದಂಡ.



# ಹೊಸ ಸ್ವಾವಲಂಬಿ ನಿರ್ಭರ ಭಾರತಕ್ಕೆ ಸಾರ್ವಜನಿಕ ವಲಯದ ಉದ್ಯಮ ನೀತಿ

सत्यमेव जयते
Goverment Of India

- ಕಳೆದ ಕೆಲವು ದಶಕಗಳಿಂದೀಚೆಗೆ ಭಾರತ ಮತ್ತು ವಿಶ್ವ ಸಾಕಷ್ಟು ಬದಲಾಗಿವೆ.
- ಹೊಸ ಸುಸಂಬದ್ಧ ನೀತಿ ಅಗತ್ಯ – ಅಲ್ಲಿ ಎಲ್ಲ ವಲಯಗಳಲ್ಲೂ ಖಾಸಗಿ ವಲಯಗಳಿಗೆ ಮುಕ್ತ ಹಾಗೂ ನಿಗದಿತ ವಲಯದ ಸಾರ್ವಜನಿಕ ವಲಯದ ಉದ್ದಿಮೆಗಳಲ್ಲಿ(ಪಿಎಸ್‌ಇ) ಅತ್ಯಂತ ಪ್ರಮುಖ ಪಾತ್ರವಹಿಸಲಿವೆ.
- ಅದರಂತೆ ಸರ್ಕಾರ ವಿಶೇಷ ನೀತಿಯನ್ನು ಪ್ರಕಟಿಸಲಿದ್ದು, ಅದರಲ್ಲಿ
- ಸಾರ್ವಜನಿಕ ಹಿತಾಸಕ್ತಿಗಾಗಿ ಪಿಎಸ್‌ಇಗಳ ಉಪಸ್ಥಿತಿಯ ಅಗತ್ಯವಿರುವ ಕಾರ್ಯತಾಂತ್ರಿಕ ವಲಯಗಳ ಪಟ್ಟಿಯನ್ನು ಪ್ರಕಟಿಸಲಾಗುವುದು.
- ಕಾರ್ಯತಂತ್ರ ವಲಯಗಳಲ್ಲಿ ಕನಿಷ್ಠ ಒಂದು ಸಾರ್ವಜನಿಕ ಉದ್ದಿಮೆಯನ್ನು ಹಾಗೆಯೇ ಉಳಿಸಲಾಗುವುದು. ಆದರೆ ಖಾಸಗಿ ವಲಯಕ್ಕೆ ಅವಕಾಶ ನೀಡಲಾಗುವುದು.
- ಇತರೆ ವಲಯಗಳಲ್ಲಿ ಪಿಎಸ್‌ಇಗಳನ್ನು ಖಾಸಗೀಕರಣಗೊಳಿಸಲಾಗುವುದು.(ಕಾರ್ಯಸಾಧು ಆಧರಿಸಿ ಕಾಲ ನಿರ್ಧಾರ ಇತ್ಯಾದಿ)
- ವ್ಯರ್ಥ ಆಡಳಿತಾತ್ಮಕ ವೆಚ್ಚ ತಗ್ಗಿಸಲು ಕಾರ್ಯ ತಾಂತ್ರಿಕ ವಲಯಗಳಲ್ಲಿ ಉದ್ದಿಮೆಗಳ ಸಂಖ್ಯೆಯಲ್ಲಿ ಒಂದರಿಂದ 4ಕ್ಕೆ ಇಳಿಸಲಾಗುವುದು; ಇತರೆ ಉದ್ದಿಮೆಗಳನ್ನು ಖಾಸಗೀಕರಣಗೊಳಿಸಲಾಗುವುದು/ವಿಲೀನಗೊಳಿಸಲಾಗುವುದು/ಹೋಲ್ಡಿಂಗ್ ಕಂಪನಿ ಅಧೀನಕ್ಕೆ ತರಲಾಗುವುದು.

# ರಾಜ್ಯ ಸರ್ಕಾರಗಳಿಗೆ ಈಗಾಗಲೇ ವಿಸ್ತರಿಸಿರುವ ನೆರವು

सत्यमेव जयते
Goverment Of India

- ರಾಜ್ಯಗಳಂತೆ ಕೇಂದ್ರವೂ ಕೂಡ ಆದಾಯ ಕೊರತೆಯನ್ನು ಎದುರಿಸುತ್ತಿದೆ.
- ಆದರೂ ಸಹ ಕೇಂದ್ರ ಸರ್ಕಾರ ರಾಜ್ಯಗಳಿಗೆ ಕಾಲಕಾಲಕ್ಕೆ ನಿರಂತರವಾಗಿ ಉದಾರ ನೆರವು ನೀಡುತ್ತಿದೆ.
- ಬಜೆಟ್ ಅಂದಾಜಿಗಿಂತ ವಾಸ್ತವ ಆದಾಯದಲ್ಲಿ ನಿರೀಕ್ಷಿಸಲಾಗದಷ್ಟು ಕುಸಿತ ಕಂಡಿದ್ದರೂ ಸಹ ಬಜೆಟ್ ಅಂದಾಜಿನಂತೆ ರಾಜ್ಯಗಳಿಗೆ ವಿಕೇಂದ್ರೀಕರಣದ ತೆರಿಗೆ ಪಾಲು (46,038 ಕೋಟಿ ರೂ.)ಏಪ್ರಿಲ್ ತಿಂಗಳಲ್ಲಿ ಸಂಪೂರ್ಣವಾಗಿ ನೀಡಲಾಗಿದೆ.
- ಕೇಂದ್ರವು ಒತ್ತಡದ ಸಂಪನ್ಮೂಲಗಳ ಮಧ್ಯೆಯೇ ರಾಜ್ಯಗಳಿಗೆ ಆದಾಯ ಕೊರತೆಯ ಅನುದಾನ(12,390ಕೋಟಿ ರೂ.) ಅನ್ನು ಸಕಾಲದಲ್ಲಿ ಏಪ್ರಿಲ್-ಮೇ ತಿಂಗಳಲ್ಲಿ ಬಿಡುಗಡೆ.
- ಎಸ್ ಡಿಆರ್ ಎಫ್ ನಿಧಿ(11,092ಕೋಟಿ ರೂ.) ಮುಂಗಡವಾಗಿ ಏಪ್ರಿಲ್ ಮೊದಲ ವಾರದಲ್ಲೇ ಬಿಡುಗಡೆ.
- ಕೋವಿಡ್ ನಿಗ್ರಹ ಚಟುವಟಿಕೆಗಳಿಗೆ ಆರೋಗ್ಯ ಸಚಿವಾಲಯದಿಂದ ನೇರವಾಗಿ 4,113 ಕೋಟಿ ರೂ. ಬಿಡುಗಡೆ.
- ಕೇಂದ್ರದ ಮನವಿ ಮೇರೆಗೆ ಆರ್ ಬಿಐನಿಂದ ಹೆಚ್ಚಳ.
- ರಾಜ್ಯಗಳ ಮುಂಗಡ ವಿಧಾನಗಳ ಮಿತಿ ಶೇ.60ಕ್ಕೆ ಏರಿಕೆ.
- ನಿರಂತರ ಓವರ್ ಡ್ರಾಫ್ಟ್ ಪಡೆಯುವ ದಿನಗಳ ಸಂಖ್ಯೆ 14ರಿಂದ 21ಕ್ಕೆ ಏರಿಕೆ.
- ತ್ರೈಮಾಸಿಕದಲ್ಲಿ ರಾಜ್ಯಗಳು ಓವರ್ ಡ್ರಾಫ್ಟ್ ಪಡೆಯಲು ನಿಗದಿ ಪಡಿಸಿರುವ ದಿನಗಳು 32 ರಿಂದ 50 ದಿನಕ್ಕೆ ಹೆಚ್ಚಳ.

# ರಾಜ್ಯ ಸರ್ಕಾರಗಳಿಗೆ ನೆರವು

सत्यमेव जयते
Goverment Of India

- ರಾಜ್ಯಗಳು ಒಟ್ಟು ದೇಶೀಯ ಉತ್ಪನ್ನ(ಜಿಎಸ್ ಡಿಪಿ)ಯ ಶೇ. 3ರಆಧಾರದಲ್ಲಿ 2020-21ನೇ ಸಾಲಿಗೆ ಒಟ್ಟು ಸಾಲದ ಮಿತಿ 6.41 ಲಕ್ಷ ಕೋಟಿ ರೂ.
- ಆ ಪೈಕಿ ಮಾರ್ಚ್ 2020ರೊಳಗೆ ಶೇ.75%ರಷ್ಟು ಪಡೆಯಲು ಅಧಿಕಾರ, ಆದರೆ ಸಮಯ ರಾಜ್ಯಗಳಿಗೆ ಬಿಟ್ಟಿದ್ದು.
- ರಾಜ್ಯಗಳು ಈವರೆಗೆ ತಮಗೆ ಸೂಚಿಸಲಾದ ಅಧಿಕೃತ ಮಿತಿಯಲ್ಲಿ ಶೇ. 14ರಷ್ಟು ಸಾಲ ಪಡೆದುಕೊಂಡಿವೆ. ಶೇ.86ರಷ್ಟು ಅಧಿಕೃತ ಸಾಲ ಇನ್ನೂ ಬಳಕೆ ಮಾಡಿಕೊಂಡಿಲ್ಲ.
- ಆದರೂ ರಾಜ್ಯಗಳು ಸಾಲದ ಮಿತಿಯನ್ನು ಶೇ. 3ರಿಂದ ಶೇ.5ಕ್ಕೆ ಹೆಚ್ಚಿಸಲು ಕೋರಿವೆ.
- ಇಂತಹ ಅನಿರೀಕ್ಷಿತ ಸನ್ನಿವೇಶದ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ರಾಜ್ಯಗಳ ಮನವಿಗೆ ಒಪ್ಪಿ 2020-21ನೇ ಸಾಲಿಗೆ ಮಾತ್ರ ರಾಜ್ಯಗಳಿಗೆ ಸಾಲದ ಮಿತಿಯನ್ನು ಶೇ. 3ರಿಂದ ಶೇ.5ಕ್ಕೆ ಹೆಚ್ಚಿಸಲು ನಿರ್ಧರಿಸಿದೆ.
- ಇದರಿಂದ ರಾಜ್ಯಗಳಿಗೆ ಹೆಚ್ಚುವರಿಯಾಗಿ 4.28 ಲಕ್ಷ ಕೋಟಿ ರೂ. ಸಂಪನ್ಮೂಲ ಲಭ್ಯ.

# ರಾಜ್ಯ ಸರ್ಕಾರಗಳಿಗೆ ಬೆಂಬಲ ಮತ್ತು ರಾಜ್ಯ ಮಟ್ಟದಲ್ಲಿ ಸುಧಾರಣೆಗಳಿಗೆ ಉತ್ತೇಜನ

सत्यमेव जयते
Goverment Of India

- ಸಾಲದ ಭಾಗ ನಿರ್ದಿಷ್ಟ ಸುಧಾರಣೆಗಳೊಂದಿಗೆ ಸಂಯೋಜಿಸಿರುತ್ತದೆ.(ಹಣಕಾಸು ಆಯೋಗದ ಶಿಫಾರಸ್ಸುಗಳು ಸೇರಿ):
  - ಕಡಿಮೆ ವಿತ್ತೀಯ ಕೊರತೆ ಮತ್ತು ಭವಿಷ್ಯದ ಜಿಎಸ್ ಡಿಪಿ ಬೆಳವಣಿಗೆ ಮೂಲಕ ಹೆಚ್ಚುವರಿ ಸಾಲದಲ್ಲಿ ಸುಸ್ಥಿರತೆ ಕಾಯ್ದುಕೊಳ್ಳಬೇಕು.
  - ವಲಸಿಗರ ಕಲ್ಯಾಣಕ್ಕೆ ಉತ್ತೇಜನ ಮತ್ತು ಆಹಾರ ವಿತರಣೆಯಲ್ಲಿ ಸೋರಿಕೆ ತಗ್ಗಿಸಲು ಕ್ರಮ.
  - ಹೂಡಿಕೆ ಮೂಲಕ ಹೆಚ್ಚಿನ ಉದ್ಯೋಗ ಸೃಷ್ಟಿ, ಇಂಧನ ವಲಯವನ್ನು ಸುಸ್ಥಿರವನ್ನಾಗಿ ಮಾಡುವ ಮೂಲಕ ರೈತರ ಹಿತರಕ್ಷಿಸಬೇಕು.
  - ಮತ್ತು ನಗರಾಭಿವೃದ್ಧಿ, ಆರೋಗ್ಯ ಮತ್ತು ನೈರ್ಮಲೀಕರಣಕ್ಕೆ ಉತ್ತೇಜನ.
- ನಾಲ್ಕು ವಲಯಗಳಲ್ಲಿ ಸುಧಾರಣೆಗಳಿಗೆ ಸಂಯೋಜನೆ: ‘ಒಂದು ರಾಷ್ಟ್ರ ಒಂದು ಪಡಿತರ ಚೀಟಿ’ ಸಾರ್ವತ್ರೀಕಗೊಳಿಸುವುದು,

ಸುಗಮ ವ್ಯಾಪಾರ ವಹಿವಾಟು, ವಿದ್ಯುತ್ ವಿತರಣೆ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಆದಾಯ.

- ಈ ಕೆಳಗಿನ ವಿಧಾನಗಳಲ್ಲಿ ವೆಚ್ಚ ಇಲಾಖೆಯಿಂದ ವಿಶೇಷ ಯೋಜನೆಯ ಅಧಿಸೂಚನೆ ಪ್ರಕಟ.
  - **0.50% ಬೇಷರತ್ ಹೆಚ್ಚಳ**
  - **ಶೇ.1ರಷ್ಟು 4 ಕಂತುಗಳಲ್ಲಿ ಅಂದರೆ ಶೇ.0.25 ಪ್ರತಿ ಕಂತಿನಲ್ಲಿ ನಿರ್ದಿಷ್ಟ ಅಳೆಯಬಹುದಾದ ಮತ್ತು ಕಾರ್ಯಸಾಧುವಾದ ಸುಧಾರಣಾ ಕ್ರಮಗಳನ್ನು ಆಧರಿಸಿ ಬಿಡುಗಡೆ.**
  - **ನಾಲ್ಕು ಸುಧಾರಣಾ ವಲಯಗಳ ಪೈಕಿ ಕನಿಷ್ಠ ಮೂರರಲ್ಲಿ ಗುರಿ ಸಾಧಿಸಿ ಹೆಜ್ಜೆಗುರುತು ಮೂಡಿಸಿದರೆ ಉಳಿದ ಶೇ.0.50 ಬಿಡುಗಡೆ.**

# ಹಿಂದಿನ ಕ್ರಮಗಳಿಂದ ಉತ್ತೇಜನ

| ಕ್ರಮ ಸಂಖ್ಯೆ | ಕ್ರಮಗಳು | ಕೋಟಿ ರೂ.ಗಳಲ್ಲಿ |
|---|---|---|
| 1. | 2020ರ ಮಾರ್ಚ್ 22ರ ನಂತರ ತೆರಿಗೆ ವಿನಾಯಿತಿಗಳಿಂದಾಗಿ ಆಗಿರುವ ಆದಾಯ ನಷ್ಟ | 7,800 |
| 2. | ಪ್ರಧಾನಮಂತ್ರಿ ಗರೀಬ್ ಕಲ್ಯಾಣ ಪ್ಯಾಕೇಜ್(ಪಿಎಂಜಿಕೆಪಿ) | 1,70,000 |
| 3. | ಆರೋಗ್ಯ ವಲಯಕ್ಕೆ ಪ್ರಧಾನಮಂತ್ರಿಗಳ ಘೋಷಣೆಗಳು | 15,000 |
| | **ಒಟ್ಟಾರೆ** | **1,92,800** |

# ಭಾಗ 1ರ ಘೋಷಣೆಗಳಲ್ಲಿ ಒದಗಿಸಲಾದ ಉತ್ತೇಜನಗಳು

सत्यमेव जयते
Goverment Of India

| ಕ್ರ.ಸಂ. | ವಿಷಯ | ಕೋಟಿ. ರೂ.ಗಳಲ್ಲಿ |
|---|---|---|
| 1 | ಎಂಎಸ್ಎಂಇ ಸೇರಿದಂತೆ ವಹಿವಾಟಿಗೆ ತುರ್ತು ಡಬ್ಲ್ಯೂ /ಸಿ ಸೌಕರ್ಯ | 3,00,000 |
| 2 | ಒತ್ತಡದಲ್ಲಿರುವ ಎಂಎಸ್ಎಂಇಗಳಿಗೆ ಉಪ ಸಾಲ | 20,000 |
| 3 | ಎಂಎಸ್ಎಂಇಗಳಿಗೆ ನಿಧಿಗಾಗಿ ನಿಧಿ ಮೂಲಕ ನೆರವು | 50,000 |
| 4. | ವಾಣಿಜ್ಯ ಮತ್ತು ಕಾರ್ಮಿಕರಿಗೆ ಇಪಿಎಫ್ ಬೆಂಬಲ | 2800 |
| 5. | ಇಪಿಎಫ್ ದರಗಳಲ್ಲಿ ಕಡಿತ | 6750 |
| 6. | ಎನ್ ಬಿಎಫ್ ಸಿ/ಎಚ್ ಎಫ್ ಸಿ/ಎಂಎಫ್ ಐ ವಿಶೇಷ ನಗದು ಯೋಜನೆ | 30,000 |
| 7. | ಎನ್ ಬಿಎಫ್ ಸಿ/ಎಂಎಫ್ ಐಗಳ ಬಾಧ್ಯತೆಗಳಿಗೆ ಆಂಶಿಕ ಸಾಲ ಖಾತ್ರಿ ಯೋಜನೆ 2.0 | 45,000 |
| 8. | ಡಿಸ್ಕಾಂಗಳಿಗೆ ಲಿಕ್ವಿಡಿಟಿಗಾಗಿ | 90,000 |
| 9. | ಟಿಡಿಎಸ್/ಟಿಸಿಎಸ್ ದರ ಕಡಿತ | 50,000 |
| | **ಆಂಶಿಕ ಮೊತ್ತ** | **5,94,550** |

# ಭಾಗ 2 ರ ಘೋಷಣೆಗಳಲ್ಲಿ ಒದಗಿಸಲಾದ ಉತ್ತೇಜನಗಳು

सत्यमेव जयते
Goverment Of India

| ಕ್ರ.ಸಂ. | ವಿಷಯ | ಕೋಟಿ. ರೂ.ಗಳಲ್ಲಿ |
|---|---|---|
| 1. | ವಲಸೆ ಕಾರ್ಮಿಕರಿಗೆ ಎರಡು ತಿಂಗಳು ಉಚಿತ ಆಹಾರಧಾನ್ಯ ಪೂರೈಕೆ | 3500 |
| 2. | ಮುದ್ರಾ ಶಿಶು ಸಾಲಕ್ಕೆ ಬಡ್ಡಿ ಸಹಾಯ ಧನ | 1500 |
| 3 | ಬೀದಿ ವ್ಯಾಪಾರಿಗಳಿಗೆ ವಿಶೇಷ ಸಾಲ ಸೌಕರ್ಯ | 5000 |
| 4 | ಸಿಎಲ್ಎಸ್ಎಸ್ ಮತ್ತು ಎಂಐಜಿ ವಸತಿಗೆ | 70,000 |
| 5 | ನಬಾರ್ಡ್ ಮೂಲಕ ಹೆಚ್ಚುವರಿ ತುರ್ತು ದುಡಿಯುವ ಬಂಡವಾಳ | 30,000 |
| 6 | ಕೆಸಿಸಿ ಮೂಲಕ ಹೆಚ್ಚುವರಿ ಸಾಲ | 2,00,000 |
| | **ಆಂಶಿಕ ಮೊತ್ತ** | **3,10,000** |

# ಭಾಗ 3ರಲ್ಲಿ ಪ್ರಕಟಿಸಲಾದ ಯೋಜನೆಗಳಿಗೆ ಉತ್ತೇಜನ

सत्यमेव जयते
Goverment Of India

| ಕ್ರ.ಸಂ. | ವಿಷಯ | ಕೋಟಿ. ರೂ.ಗಳಲ್ಲಿ |
|---|---|---|
| 1. | ಸಣ್ಣ ಆಹಾರ ಉದ್ಯಮಗಳಿಗೆ | **10,000** |
| 2. | ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆ | **20,000** |
| 3. | ಟಿಒಪಿ ಯಿಂದ ಟೋಟಲ್: ಹಸಿರು ಕಾರ್ಯಾಚರಣೆ | **500** |
| 4. | ಕೃಷಿ ಮೂಲಸೌಕರ್ಯ ನಿಧಿ | **1,00,000** |
| 5. | ಪಶುಸಂಗೋಪನೆ ಮೂಲಸೌಕರ್ಯ ಅಭಿವೃದ್ಧಿ ನಿಧಿ | **15,000** |
| 6 | ಗಿಡಮೂಲಿಕೆ ಸಸ್ಯಗಳನ್ನು ಬೆಳೆಯಲು ಉತ್ತೇಜನ | **4,000** |
| 7 | ಜೇನು ಸಾಕಾಣಿಕೆ ಉಪಕ್ರಮ | **500** |
| | **ಆಂಶಿಕ ಮೊತ್ತ** | **1,50,000** |

# ಭಾಗ 4 ಮತ್ತು ಭಾಗ 5ರಲ್ಲಿ ಮಾಡಲಾದ ಘೋಷಣೆಗಳಿಗೆ ಉತ್ತೇಜನ

सत्यमेव जयते
Goverment Of India

| ಕ್ರ.ಸಂ. | ವಿಷಯ | ಕೋಟಿ. ರೂ.ಗಳಲ್ಲಿ |
|---|---|---|
| **1** | ಕಾರ್ಯಸಾಧುವಾದ ಅಂತರ ನಿಧಿ | 8,100 |
| **2** | ಮನ್ರೇಗಾ ಯೋಜನೆಗೆ ಹೆಚ್ಚುವರಿ ಅನುದಾನ | 40,000 |
| | **ಆಂಶಿಕ ಮೊತ್ತ** | **48,100** |

# ಆತ್ಮ ನಿರ್ಭರ ಪ್ಯಾಕೇಜ್ ಅಡಿಯಲ್ಲಿ ಒಟ್ಟಾರೆ ಒದಗಿಸಿರುವ ಉತ್ತೇಜನ ಕ್ರಮಗಳು

सत्यमेव जयते
Goverment Of India

| ಕ್ರ.ಸಂ. | ವಿಷಯ | | ಕೋಟಿ. ರೂ.ಗಳಲ್ಲಿ |
|---|---|---|---|
| 1 | ಭಾಗ 1 | | 5,94,550 |
| 2 | ಭಾಗ 2 | | 3,10,000 |
| 3 | ಭಾಗ 3 | | 1,50,000 |
| 4 | ಭಾಗ 4 ಮತ್ತು ಭಾಗ5 | | 48,100 |
| | | **ಆಂಶಿಕ ಮೊತ್ತ** | **11,02,650** |
| 5 | ಪಿಎಂಜಿಕೆಪಿ ಸೇರಿದಂತೆ ಹಿಂದಿನ ಕ್ರಮಗಳು | (ಹಿಂದಿನ ಸ್ಲೈಡ್) | 1,92,800 |
| 6 | ಆರ್ ಬಿಐ ಕ್ರಮಗಳು(ವಾಸ್ತವ) | | 8,01,603 |
| | | **ಆಂಶಿಕ ಮೊತ್ತ** | **9,94,403** |
| | | **ಒಟ್ಟು ಮೊತ್ತ** | **20,97,053** |

# ಧನ್ಯವಾದಗಳು